ಶ್ರೀ ಕೆ. ರಘುಪತಿ ಭಟ್ : ಇವತ್ತು ಕನಿಷ್ಟ ಕಾಂಟ್ರಾಕ್ಟ್ ಬೇಸಿಸ್‌ನಲ್ಲಿ ಆದರೂ ತೆಗೆದುಕೊಳ್ಳಬಹುದು ಅದನ್ನೂ ತೆಗೆದುಕೊಳ್ಳುತ್ತಿಲ್ಲ. ಮೂರು ಮೂರು ತಿಂಗಳಿಗೆ ತೆಗೆದುಕೊಂಡರೆ ಅವರಿಗೆ ಬೇಕಾದಂಥ ಪರಿಣತೆ ಇರುವುದಿಲ್ಲ.

ಛೇರ್ಮನ್ : ಈಗಾಗಲೇ ಅವರು ಹೇಳಿದರು, ಮೂರು ಮೂರು ತಿಂಗಳ ಅವಧಿಗೆ ಅವರಿಗೆ temporary ಆಗಿ ತೆಗೆದುಕೊಳ್ಳಲು ಸೂಚನೆ ಕೊಟ್ಟಿದ್ದೇವೆ ಎಂದು.

ಶ್ರೀ ಕೆ.ರಘುಪತಿ ಭಟ್ : ಇವತ್ತು ಆರೋಗ್ಯ ಇಲಾಖೆಯಲ್ಲಿರಬಹುದು, ನಗರಾಭಿವೃದ್ಧಿ ಇಲಾಖೆಯಲ್ಲಿರಬಹುದು, temporary contract basis ನಲ್ಲಿ ಟೆಂಡರ್ ಕರೆದು ಮಾಡುತ್ತಾರೆ. ಆ ರೀತಿಯಾದರೂ ಇವರ ಇಲಾಖೆಗೆ ಮಾಡಿಕೊಳ್ಳಬಹುದಲ್ಲಾ ?

ಛೇರ್ಮನ್ : ಅದನ್ನು ಹೇಳಿದರು, ಮೂರು ಮೂರು ತಿಂಗಳ ಅವಧಿಗೆ ನಾನು ನೇಮಕ ಮಾಡಿಕೊಳ್ಳಲು ಹೇಳಿದ್ದೇನೆಂದು.

ರಸ್ತೆ ಅಭಿವೃದ್ಧಿಗಾಗಿ ಮಾಡಿದ ವೆಚ್ಚ

549(6161) ಶ್ರೀ ಡಿ.ಆರ್. ಪಾಟೀಲ್ (ಗದಗ್) ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸರ್ಕಾರ ಕಳೆದ 3 ವರ್ಷಗಳ್ಲಲಿ ಲೋಕೋಪಯೋಗಿ ಇಲಾಖೆಯಡಿ ಬೇರೆ ಬೇರೆ ಯೋಜನೆ ಮುಖಾಂತರ ರಸ್ತೆ ಅಭಿವೃದ್ಧಿ, ನಿರ್ವಹಣೆ ಹಾಗೂ ದುರಸ್ತಿಗಾಗಿ ಖರ್ಚು ಮಾಡಿದ ಹಣ ಎಷ್ಟು; ಈ ದುರಸ್ತಿಯಿಂದ ಜನಗಳಿಗೆ ಉಪಯೋಗವಾಗಿದೆಯೇ ; (ಜಿಲ್ಲಾವಾರು ಮಾಹಿತಿ ನೀಡುವುದು) ;

ಆ) ರಾಜ್ಯದಲ್ಲಿ KRDCL ಹಾಗೂ K-SHIP ಸಂಸ್ಥೆಗಳ ಮುಖಾಂತರ ಕಳೆದ ಮೂರು ವರ್ಷಗಳಲ್ಲಿ ನಡೆದಿರುವ ರಸ್ತೆ ಅಭಿವೃದ್ಧಿ, ನಿರ್ವಹಣೆ ಹಾಗೂ ದುರಸ್ತಿಗಾಗಿ ಖರ್ಚಾದ ಹಣ ಎಷ್ಟು; ಸಾಧಿಸಿದ ಪ್ರಗತಿ ಎಷ್ಟು; (ಜಿಲ್ಲಾವಾರು ವಿವರ ನೀಡುವುದು) ;

ಇ) ಈ ಕಾರ್ಯಕ್ರಮಗಳನ್ನು (ರಸ್ತೆ ಅಭಿವೃದ್ಧಿ) ತೆಗೆದು ಕೊಳ್ಳಲು ಸರ್ಕಾರಕ್ಕೆ ಇರುವ ಮಾನದಂಡಗಳೇನು;

ಈ) ಈ ಬಗೆಗೆ ತಾರತಮ್ಯವಾಗಿದ್ದಲ್ಲಿ ಇನ್ನು ಮುಂದಾದರು ಎಲ್ಲಾ ಪ್ರದೇಶಗಳಲ್ಲೂ ಸಮಾನವಾದ ಅಭಿವೃದ್ಧಿ ಕಾಮಗಾರಿಗಳನ್ನು ಸರ್ಕಾರ ಕೈಗೊಳ್ಳುವುದೇ?

ಶ್ರೀ ಹೆಚ್.ಡಿ. ರೇವಣ್ಣ(ಲೋಕೋಪಯೋಗಿ ಹಾಗೂ ಇಂಧನ ಸಚಿವರು) :

ಅ) ಕಳೆದ 3 ವರ್ಷಗಳಲ್ಲಿ ಲೋಕೋಪಯೋಗಿ ಇಲಾಖೆಯಡಿ ಬೇರೆ ಬೇರೆ ಯೋಜನೆ ಮುಖಾಂತರ ರಸ್ತೆ ಅಭಿವೃದ್ಧಿ, ನಿರ್ವಹಣೆ ಹಾಗೂ ದುರಸ್ತಿಗಾಗಿ ಖರ್ಚು ಮಾಡಿದ ಹಣದ ಜಿಲ್ಲಾವಾರು ವಿವರಗಳನ್ನು ಅನುಬಂಧ–1 ರಲ್ಲಿ ಲಗತ್ತಿಸಿದೆ.

ರಸ್ತೆಗಳ ಅಭಿವೃದ್ಧಿಯಿಂದ ಸಾರ್ವಜನಿಕರಿಗೆ ಬಹಳಷ್ಟು ರೀತಿಯಲ್ಲಿ ಉಪಯೋಗವಾಗಿರುತ್ತದೆ.

ಆ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದಿಂದ ತೆಗೆದುಕೊಂಡ ರಸ್ತೆಯ ಅಭಿವೃದ್ಧಿ ಮತ್ತು ನಿರ್ವಹಣೆಗಾಗಿ ಒಟ್ಟು ರೂ. 472.12 ಕೋಟಿಗಳನ್ನು ಖರ್ಚುಮಾಡಿದೆ. ಜಿಲ್ಲವಾರು ವೆಚ್ಚವಾದ ಹಣದ ಮತ್ತು ಸಾಧಿಸಿದ ಪ್ರಗತಿಯ ಮಾಹಿತಿಯನ್ನು ಅನುಬಂಧ–2 ಹಾಗೂ 3 ರಲ್ಲಿ ಲಗತ್ತಿಸಲಾಗಿದೆ.

ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ದಿ ಯೋಜನೆಗೆ ಸಂಬಂಧಪಟ್ಟಂತೆ ಸುಮಾರು 2381 ಕಿಮೀ. ಉದ್ದದ ರಸ್ತೆಯನ್ನು ಕೈಗೊಳ್ಳಲಾಗಿದ್ದು, ಇದಕ್ಕೆ ಸಂಬಂಧಿಸಿದಂತೆ ಕಳೆದ 3 ವರ್ಷಗಳಲ್ಲಿನ ಸಾಧನೆಯ ಸಂಕ್ಷಿಪ್ತ ವಿವರಗಳು ಕೆಳಕಂಡಂತಿವೆ.

ವರ್ಷ	ಭೌತಿಕಸಾಧನೆ (ಕಿಮೀ.ಗಳಲ್ಲಿ)	ಆರ್ಥಿಕ ಸಾಧನೆ (ರೂ.ಕೋಟಿಗಳಲ್ಲಿ)
2002–03	191	161
2003–04	366	232
2004–05	510	480
ಒಟ್ಟು	**1067**	**873**

ಜಿಲ್ಲಾವಾರು ವಿವರಗಳನ್ನು ಅನುಬಂಧ–4ರಲ್ಲಿ ಲಗತ್ತಿಸಲಾಗಿದೆ.

ಇ) ರಸ್ತೆಗಳ ಅಭಿವೃದ್ಧಿ ಕಾರ್ಯಗಳಿಗೆ ಈ ಕೆಳಕಂಡ ಮಾನದಂಡಗಳನ್ನು ಅನುಸರಿಸಲಾಗುತ್ತಿದೆ.

1) ರಸ್ತೆಯ ಮೇಲಿನ ಸಂಚಾರ ಸಾಂದ್ರತೆ ಅನುಗುಣವಾಗಿ
2) ಪ್ರಮುಖ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳನ್ನು ಸಂಪರ್ಕಿಸುವ ಹಾಗೂ
3) ಅಂತರ ರಾಜ್ಯಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ
4) ಗಣಿ ಉತ್ಪನ್ನಗಳ ಸಾಗಾಣಿಕೆ
5) ಐತಿಹಾಸಿಕ ಸ್ಥಳಗಳಿಗೆ ಮತ್ತು ಧಾರ್ಮಿಕ ಸ್ಥಳಗಳಿಗೆ ಸಂಪರ್ಕ

ಇದಲ್ಲದೆ, ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ದಿ ಯೋಜನೆಯಡಿಯಲ್ಲಿ ಅಭಿವೃದ್ದಿಪಡಿಸಲಿರುವ ರಸ್ತೆಗಳನ್ನು ಗುರುತಿಸಲು ಅಂತರಾಷ್ಟ್ರೀಯ ಮಟ್ಟದ ಸಲಹೆಗಾರರನ್ನು ನಿಯೋಜಿಸಿ, ಅವರ ಅಧ್ಯಯನದ ಮೇರೆಗೆ ರಸ್ತೆಗಳನ್ನು ಗುರುತಿಸಲಾಗಿದೆ. ಈ ರಸ್ತೆಗಳನ್ನು ಗುರುತಿಸಲು ಈ ಕೆಳಗಿನ ಅಧ್ಯಯನಗಳನ್ನು ಮಾಡಲಾಗಿದೆ.

1) ಪ್ರಸ್ತುತ ಜನವಾಹನ ಸಾಂದ್ರತೆ (ಟ್ರಾಫಿಕ್) ಹಾಗೂ ರಸ್ತೆಗಳ ವಿನ್ಯಾಸಿತ ಸಾಂದ್ರತೆ
2) ಮಾರ್ಗ ಪ್ರಭಾವ ಕ್ಷೇತ್ರದಲ್ಲಿ ಆಗುವ ಅಭಿವೃದ್ದಿ ಹಾಗೂ ಇದರಿಂದ ಹೆಚ್ಚಾಗುವ ಜನವಾಹನ ಸಾಂಧ್ರತೆ.
3) ಪರಿಸರ ಪರಿಣಾಮ ಸಮೀಕ್ಷೆ
4) ಸಾಮಾಜಿಕ ದಕ್ಷೆ ಸಮೀಕ್ಷೆ
5) ಯೋಜನೆಯಲ್ಲಿ ಅಭಿವೃದ್ಧಿಗೆ ಕೈಗೆತ್ತಿಕೊಳ್ಳುವ ರಸ್ತೆಗಳಿಂದ ಮುಂದೆ ದೊರೆಯಬಹುದಾದ ಆರ್ಥಿಕ ಲಾಭದ ಸಮೀಕ್ಷೆ ಸರಕು ಸಾಗಾಣಿಕೆಯಲ್ಲಿ ಹಾಗೂ ರಸ್ತೆಯ ಪಲಾನುಭವಗಳಿಗೆ ಆಗುವ ಆರ್ಥಿಕ ಹಾಗೂ ಸಮಯದ ಉಳಿತಾಯದ ಸಮೀಕ್ಷೆ ಇತ್ಯಾದಿ

ಮೇಲಿನ ಎಲ್ಲಾ ಸಮೀಕ್ಷೆಗಳನ್ನು ಪರಿಗಣಿಸಿ ರಸ್ತೆಗಳ ಮೌಲ್ಯಮಾಪನ ಮಾಡಿ ಅಧ್ಯತೆ ಮೇರೆಗೆ ರಸ್ತೆಗಳನ್ನು ಆರಿಸಲಾಗಿದೆ.

ಈ) ಈ ರಸ್ತೆಗಳನ್ನು ಅಭಿವೃದ್ದಿಗಾಗಿ ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಆಯ್ಕೆ ಮಾಡಲಾಗಿದ್ದು, ಇದರಲ್ಲಿ ತಾರತಮ್ಯದ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಕಳೆದ ಮೂರು ವರ್ಷಗಳಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ಬೇರೆ ಬೇರೆ ಯೋಜನೆಗಳ ರಸ್ತೆ ಅಭಿವೃದ್ಧಿ, ನಿರ್ವಹಣೆ ಹಾಗೂ ದುರಸ್ತಿಗಾಗಿ ಖರ್ಚು ಮಾಡಿದ ವಿವರಣ ಪಟ್ಟಿ

ರೂ.ಲಕ್ಷಗಳಲ್ಲಿ

ಕ್ರ.ಸಂ	ವಿಭಾಗದ ಹೆಸರು	2002-03					2003-04				2004-05		
		5054 ರಸ್ತೆ ಮತ್ತು ಸೇತುವೆ (ಯೋಜನೆ)	ನಬಾರ್ಡ್ ನೆರವಿನ (ಯೋಜನೆ)	ಕೇಂದ್ರ ರಸ್ತೆ ನಿಧಿ (ಯೋಜನೆ)	3054 ರಸ್ತೆ ಮತ್ತು ಸೇತುವೆ (ಯೋಜನೇತರ)	5054 ರಸ್ತೆ ಮತ್ತು ಸೇತುವೆ (ಯೋಜನೆ)	ನಬಾರ್ಡ್ ನೆರವಿನ (ಯೋಜನೆ)	ಕೇಂದ್ರ ರಸ್ತೆ ನಿಧಿ (ಯೋಜನೆ)	3054 ರಸ್ತೆ ಮತ್ತು ಸೇತುವೆ (ಯೋಜನೇತರ)	5054 ರಸ್ತೆ ಮತ್ತು ಸೇತುವೆ (ಯೋಜನೆ)	ನಬಾರ್ಡ್ ನೆರವಿನ (ಯೋಜನೆ)	ಕೇಂದ್ರ ರಸ್ತೆ ನಿಧಿ (ಯೋಜನೆ)	3054 ರಸ್ತೆ ಮತ್ತು ಸೇತುವೆ (ಯೋಜನೆ)
1	ಬೆಂಗಳೂರು	20.52	1073.33	212.79	678.42	4.27	706.31	127.63	706.62	411.15	535.19	281.77	1505.65
2	ತುಮಕೂರು	10.90	1153.41	0.00	506.67	3.24	1323.27	76.05	575.41	7.08	483.12	322.80	1339.08
3	ಕೋಲಾರ	35.44	991.47	239.03	539.05	4.82	451.87	206.06	617.82	44.61	442.17	257.09	883.50
4	ಮೈಸೂರು	60.80	878.61	171.44	508.75	23.06	473.09	1.53	740.08	0.00	0.00	58.38	404.16
5	ಚಾಮರಾಜನಗರ	1.91	455.08	56.12	141.57	2.00	90.64	3.59	166.71	0.00	1.80	0.00	13.58
6	ಮಂಡ್ಯ	279.74	1321.03	1082.50	988.22	1850.28	507.54	305.29	1102.32	254.00	0.00	0.00	0.05
7	ಹಾಸನ	72.71	891.40	487.22	331.55	54.54	393.04	91.08	615.64	51.24	258.56	0.03	1820.94
8	ಚಿಕ್ಕಮಗಳೂರು	5.38	507.23	350.58	244.43	4.03	692.60	196.03	355.29	2.24	557.47	0.15	663.26
9	ಮಂಗಳೂರು	21.982	542.524	87.852	348.215	3.024	497.476	241.125	245.826	19.69	240.053	0.00	457.264
10	ಉಡುಪಿ	18.378	318.218	172.583	203.161	25.372	789.627	333.827	197.240	69.753	259.797	51.258	537.598
11	ಮಡಿಕೇರಿ	10.935	133.151	59.143	211.289	7.09	38.837	119.594	279.830	10.29	7.27	114.61	612.902
12	ಶಿವಮೊಗ್ಗ	17.605	822.629	186.055	362.670	31.729	1210.767	87.130	305.753	66.36	553.46	0.83	912.740
13	ದಾವಣಗೆರೆ	73.88	518.48	206.85	355.96	311.02	623.61	243.30	364.04	237.10	566.30	311.56	747.18
14	ಚಿತ್ರದುರ್ಗ	0.00	668.80	186.60	291.42	24.49	274.63	126.05	307.48	0	641.11	0.00	778.91
	ಒಟ್ಟು	630.180	10275.362	3498.763	5711.375	2348.965	8073.307	2158.286	6580.059	1173.513	4546.300	1398.478	10676.814

ಅನುಬಂಧ – I

ಬೇರೆ ಬೇರೆ ಯೋಜನೆ ಅಡಿಯಲ್ಲಿ ರಸ್ತೆಗಳ ಅಭಿವೃದ್ಧಿ ಮತ್ತು ನಿರ್ವಹಣೆಗೆ ಖರ್ಚು ಮಾಡಿದ ಹಣದ ವಿವರ

ಸಂ.	ಜಿಲ್ಲೆಯ ಹೆಸರು	2002–2003				2003–2004				2004–2005			
		ನಬಾರ್ಡ	ಕೇಂದ್ರ ರಸ್ತೆ ನಿಧಿ	5054 ರಸ್ತೆ ಮತ್ತು ಸೇತುವೆ	3054 ರಸ್ತೆ ಮತ್ತು ಸೇತುವೆ	ನಬಾರ್ಡ	ಕೇಂದ್ರ ರಸ್ತೆ ನಿಧಿ	5054 ರಸ್ತೆ ಮತ್ತು ಸೇತುವೆ	3054 ರಸ್ತೆ ಮತ್ತು ಸೇತುವೆ	ನಬಾರ್ಡ	ಕೇಂದ್ರ ರಸ್ತೆ ನಿಧಿ	5054 ರಸ್ತೆ ಮತ್ತು ಸೇತುವೆ	3054 ರಸ್ತೆ ಮತ್ತು ಸೇತುವೆ
1	2	3	4	5		3	4	5		3	4	5	
1	ಧಾರವಾಡ	425.25	137.93	16.38	225.70	657.15	94.45	93.56	158.33	159.92	217.77	89.37	532.91
2	ಹಾವೇರಿ	464.62	231.57	–	202.14	199.82	69.10	43.23	268.07	820.02	524.74	–	638.61
3	ಗದಗ	384.83	171.05	6.00	165.86	269.49	119.01	11.95	196.03	486.78	163.51	9.88	489.84
4	ಕಾರವಾರ	781.23	81.79	36.25	316.29	721.67	480.85	16.19	468.99	545.64	178.60	57.61	859.22
5	ಬೆಳಗಾವಿ	1565.50	155.99	152.60	845.69	1206.34	378.99	362.20	763.41	555.01	216.52	165.65	1646.70
6	ಚಿಕ್ಕೋಡಿ												
7	ಬಿಜಾಪುರ	874.71	190.11	0.43	277.79	443.40	36.39	322.91	310.61	215.54	1.15	1.08	714.41
8	ಬಾಗಲಕೋಟ	995.62	185.22	22.53	328.88	632.32	174.26	87.41	288.94	273.00	–	35.84	434.38
9	ಗುಲಬರ್ಗಾ	1851.85	494.71	21.84	495.33	1757.43	270.41	22.32	370.38	2118.84	423.81	65.08	1136.65
10	ಯಾದಗಿರಿ												
11	ಬೀದರ್	511.82	116.02	50.93	383.90	314.30	82.80	51.84	315.85	394.05	29.10	110.64	832.02
12	ಬಳ್ಳಾರಿ	307.86	–	2041.72	303.38	474.45	–	1655.23	223.50	661.38	29.88	1618.27	544.36
13	ರಾಯಚೂರು	829.91	241.55	10.50	243.46	368.51	149.04	12.16	235.18	784.00	–	4.41	537.81
14	ಕೊಪ್ಪಳ	414.02	140.74	14.85	182.55	231.15	58.79	–	235.47	188.96	–	17.13	617.93
	ಒಟ್ಟು	9470.22	2146.68	2374.03	3970.97	7246.03	1914.09	2679.00	3834.76	7203.14	1785.08	2174.96	8984.84

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ
ಕಳೆದ ಮೂರು ವರ್ಷಗಳಲ್ಲಿ ನಿರ್ವಹಣೆಗಾಗಿ ತೆಗೆದುಕೊಂಡ ರಸ್ತೆಗಳ ವಿವರ

ರಸ್ತೆಯ ಹೆಸರು	ಅಭಿವೃದ್ಧಿ ಪಡಿಸಿದ ಇಲ್ಲಿಯವರೆಗೆ ರಸ್ತೆಯ ಉದ್ದ ಕಿ.ಮೀ.ಗಳಲ್ಲಿ	ಖರ್ಚಾದ ಹಣ ಕೋಟಿರೂ. ಗಳಲ್ಲಿ	ಸಾಧಿಸಿರುವ ಪ್ರಗತಿ
1) ಗುಲ್ಬರ್ಗಾ ಜಿಲ್ಲೆ			
ಜೇವರಗಿ ವಿಜಾಪುರ ರಸ್ತೆ ಗುಲ್ಬರ್ಗಾ ನಗರದಲ್ಲಿ	36.80	23.66	ಕಾಮಗಾರಿ ಮುಕ್ತಾಯಗೊಂಡಿದೆ
ವರ್ತುಲ ರಸ್ತೆ ನಿರ್ಮಾಣ	14.50	20.34	ಕಾಮಗಾರಿ ಮುಕ್ತಾಯಗೊಂಡಿದೆ
ವಾಡಿ–ರಾಯಚೂರು (ಆಂಧ್ರ ಗಡಿವರೆಗೆ)	88.00	25.52	ಕಾಮಗಾರಿ ಪ್ರಗತಿಯಲ್ಲಿದ್ದು.
ಸಿಂಧಗಿ–ಶಹಪುರ ರಸ್ತೆ	5.00	1.83	ಫೆಬ್ರವರಿ 2006 ರಲ್ಲಿ ಪೂರ್ತಿಗೊಳ್ಳುವುದು
ವಾಘ್ದಾರಿ–ರಿಬ್ಬನಪಲ್ಲಿ ರಸ್ತೆ	6.80	2.44	ಕಾಮಗಾರಿ ಮುಕ್ತಾಯಗೊಂಡಿದೆ
ಒಟ್ಟು		73.79	
2) ವಿಜಾಪುರ ಜಿಲ್ಲೆ			
ಜೇವರಗಿ–ವಿಜಾಪುರ ರಸ್ತೆ ಪ್ಯಾಕೇಜ್ 2,3 ಮತ್ತು 4	82.80	48.82	ಪ್ಯಾಕೇಜ್ ಎರಡರ ಕಾಮಗಾರಿ ಮುಕ್ತಾಯದ ಹಂತದಲ್ಲಿದ್ದು ಉಳಿದ ಎರಡು ಪ್ಯಾಕೇಜುಗಳ ಕಾಮಗಾರಿಗಳು ಡಿಸೆಂಬರ್–05 ರಲ್ಲಿ ಮುಕ್ತಾಯಗೊಳ್ಳುವುವು
3) ಗದಗ ಜಿಲ್ಲೆ			
ರೋಣ–ಬದಾಮಿ ರಸ್ತೆ	40.00	13.47	ಕಾಮಗಾರಿಗಳು ಪ್ರಗತಿಯಲ್ಲಿದೆ
4) ಬೆಳಗಾಂ ಜಿಲ್ಲೆ			
ಸದಲಗಾ–ದತ್ತವಾಡ ರಸ್ತೆ	6.00	0.99	ಕಾಮಗಾರಿ ಮುಕ್ತಾಯಗೊಂಡಿದೆ
4)ಮಂಡ್ಯ ಜಿಲ್ಲೆ			
ಹಳೇ ಎಂ.ಸಿ. ರಸ್ತೆ ಮಂಡ್ಯ, ಮೈಸೂರು,	7.00	4.15	ಕಾಮಗಾರಿ ಮುಕ್ತಾಯಗೊಂಡಿದೆ
ಬೆಂಗಳೂರು–ಮೈಸೂರು ರಸ್ತೆ	111.00	44.00	ಕಾಮಗಾರಿಗಳು ಪ್ರಗತಿಯಲ್ಲಿದ್ದು ಮಾರ್ಚ್ 2006 ರಲ್ಲಿ ಪೂರ್ಣಗೊಳ್ಳುವುದು
5)ಹಾಸನ ಜಿಲ್ಲೆ			
ಬಿಳಿಕೆರೆ–ಬೇಲೂರು ಪ್ಯಾಕೇಜ್ 2 & 3	80.40	40.24	ಪ್ಯಾಕೇಜ್–2 ಕಾಮಗಾರಿ ಮುಗಿದಿದ್ದು, ಪ್ಯಾಕೇಜ್–3 ಕಾಮಗಾರಿ ಪ್ರಗತಿಯಲ್ಲಿದೆ

6) ಮೈಸೂರು ಜಿಲ್ಲೆ (ಬಿ.ಬಿ–1)	34.40	10.81	ಕಾಮಗಾರಿಗಳು ಪ್ರಗತಿಯಲ್ಲಿವೆ
7) ದಕ್ಷಿಣ ಕನ್ನಡ ಜಿಲ್ಲೆ			
ಕಡೂರು ಬಂಟ್ವಾಳ–ಉಡುಪಿ– ಧರ್ಮಸ್ಥಳ ರಸ್ತೆ	49.34	2.32	ಕಾಮಗಾರಿ ಮುಕ್ತಾಯಗೊಂಡಿದೆ
8) ಕೊಪ್ಪಳ ರಾಜ್ಯಹೆದ್ದಾರಿ ನಿರ್ವಹಣೆ			
ಮರುಡಾಂಬರೀಕರಣ	155.00	6.08	ಕಾಮಗಾರಿ ಮುಕ್ತಾಯಗೊಂಡಿದೆ
9) ಕೊಡಗು ರಾಜ್ಯಹೆದ್ದಾರಿ ನಿರ್ವಹಣೆ			
ಮರುಡಾಂಬರೀಕರಣ	116.68	7.17	ಕಾಮಗಾರಿ ಮುಕ್ತಾಯಗೊಂಡಿದೆ
ಒಟ್ಟು	**833.72**	**251.83**	

ಅನುಬಂಧ–3

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ

3 ವರ್ಷದ ರಾಜ್ಯ ಹೆದ್ದಾರಿ ನಿರ್ವಹಣೆಗೆ ಮಾಡಿದ ವೆಚ್ಚಗಳ ವಿವರ

ಕ್ರಮ ಸಂ	ಲೋಕೋಪಯೋಗಿ ವಿಭಾಗ	ವೆಚ್ಚ(ರೂ.)
1	ತುಮಕೂರು	113736101
2	ಹಾಸನ	194921395
3	ಕೋಲಾರ	127547637
4	ಮೈಸೂರು	60467110
5	ಮಂಡ್ಯ	30505780
6	ಚಿತ್ರದುರ್ಗ	128397867
7	ಚಾಮರಾಜನಗರ	16036658
8	ಶಿವಮೊಗ್ಗ	109280641
9	ಮಂಗಳೂರು	82614604
10	ಉಡುಪಿ	88743771
11	ಕೊಡಗು	34781189
12	ಬೆಂಗಳೂರು	117011457
13	ಚಿಕ್ಕಮಗಳೂರು	107843079
14	ದಾವಣಗೆರೆ	73747445
15	ಬಿಜಾಪುರ	60142666
16	ಗದಗ	41014645
17	ಬೆಳಗಾವಿ	151250120
18	ಹಾವೇರಿ	49461552
19	ಬಳ್ಳಾರಿ	48169212
20	ಕಾರವಾರ(ಪ್ಯಾಕೇಜ್ 1)	26802795
21	ಕಾರವಾರ(ಪ್ಯಾಕೇಜ್ 2)	84641842
22	ಯಾದಗಿರಿ	86093171
23	ರಾಯಚೂರು	45100139

24	ಬೀದರ್	64123273
25	ಧಾರವಾಡ	34066867
26	ಗುಲ್ಬರ್ಗ	139568789
26 a	ಗುಲ್ಬರ್ಗ (ಹೆಚ್ಚುವರಿ)	2270660
27	ಬಾಗಲಕೋಟೆ	50832533
28	ಕೊಪ್ಪಳ	33766633
	ಒಟ್ಟು	**2202939631**

ಅನುಬಂಧ–4

ಕರ್ನಾಟಕ ರಾಜ್ಯ ಅಭಿವೃದ್ಧಿ ಯೋಜನೆ

ಜಿಲ್ಲಾವಾರು ರಸ್ತೆಗಳ ಉದ್ದದ ವಿವರ

ಜಿಲ್ಲೆ	ಒಟ್ಟು(ಕಿ.ಮೀ)	30.06.2005 ರವರೆಗೆ ಪ್ರಗತಿ (ಕಿ.ಮೀ)	ಷರ
1	2	3	4
ಬೀದರ್	59.00	4.69	
ಗುಲ್ಬರ್ಗ	168.00	163.92	
ರಾಯಚೂರು	357.99	282.91	
ಕೊಪ್ಪಳ	76.00	56.00	
ಬಳ್ಳಾರಿ	123.96	39.93	
ಬಿಜಾಪುರ	79.40	36.00	
ಬಾಗಲಕೋಟೆ	174.40	21.37	
ಬೆಳಗಾಂ	381.04	244.63	
ಗದಗ	62.96	–	ಗುತ್ತಿಗೆದಾರರನ್ನು ಇತ್ತೀಚಿಗೆ ಗೊತ್ತುಪಡಿಸಲಾಗಿದ್ದು ಪ್ರಾರಂಭಿಕ ಸಿದ್ದತೆಗಳು ಚಾಲನೆಯಲ್ಲಿವೆ
ಧಾರವಾಡ	26.58	3.34	
ಉತ್ತರ ಕನ್ನಡ	276.82	75.79	
ಮೈಸೂರು	59.00	36.21	
ಮಂಡ್ಯ	72.00	14.15	
ತುಮಕೂರು	74.46	36.46	
ಚಿತ್ರದುರ್ಗ	160.25	96.88	
ದಾವಣಗೆರೆ	111.90	19.50	
ಶಿವಮೊಗ್ಗ	21.50	21.50	
ಹಾಸನ	11.50	11.50	
ಚಿಕ್ಕಮಗಳೂರು	69.50	69.50	
ಒಟ್ಟು	**2368.26**	**1234.28**	
ಅನಂತಪುರ	11.94	–	
ಒಟ್ಟು	**2380.20**	**1234.28**	

ಶ್ರೀ ಡಿ.ಆರ್.ಪಾಟೀಲ್ : ಮಾನ್ಯ ಅಧ್ಯಕ್ಷರೆ, 2054, 3054 ಮತ್ತು ನಬಾರ್ಡ್ ಹಾಗೂ ಸಿ.ಆರ್.ಎಫ್.ನೊಳಗೆ ಗದಗ್ ಜಿಲ್ಲೆಗೆ ಅಷ್ಟು ಅನುಕೂಲವಾಗಿಲ್ಲ ಅದ್ದರಿಂದ ದಯವಿಟ್ಟು ಹೆಚ್ಚು ಅನುಕೂಲವಾಗುವ ಹಾಗೂ ಉಳಿದ ರಸ್ತೆಗಳಿಗೆ ತಾವು ಮಾಡಿಕೊಡಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ. ಈಗ ಕೆ.ಆರ್.ಡಿ.ಸಿ. ಯಿಂದ ಹಿಂದೆ ಎಸ್.ಎಂ.ಕೃಷ್ಣರವರ ಸರ್ಕಾರವಿದ್ದಾಗ, ಈಗಿನ ಮುಖ್ಯಮಂತ್ರಿಗಳು ಪಿ.ಡಬ್ಲ್ಯೂಡಿ. ಮಿನಿಸ್ಟರ್ ಆಗಿದ್ದಾಗ ಗದಗ್ ನಿಂದ ಮುಂಡರಗಿ,ಕೊರ್ಲಳ್ಳಿ ಬ್ರಿಡ್ಜ್ ಮೇಲೆ ಹಾಯಿಸಿ ಬೆಂಗಳೂರಿಗೆ ಬರುವಂಥ ರಸ್ತೆಯನ್ನು ಹರಿಹರ ಅಥವಾ ದಾವಣಗೆರೆಗೆ ಬಂದು ಜೋಡಿಸಿದರೆ ನಮಗೆ 65 ಕಿಲೋಮೀಟರ್‌ನಷ್ಟು ಬೆಂಗಳೂರು ಕಡಿಮೆಯಾಗುತ್ತದೆ. ಮುಂಡರಗಿಯವರಿಗೆ 100 ಕಿಲೋಮೀಟರ್ ಕಡಿಮೆಯಾಗುತ್ತದೆ. ಅದನ್ನು ಮಾಡುವುದಕ್ಕೆ ಅವರು ಒಪ್ಪಿಗೆ ಕೊಟ್ಟಿದ್ದರು. ಆದರೆ ಅದು ಇಂಪ್ಲಿಮೆಂಟ್ ಆಗಲಿಲ್ಲ. ದಯವಿಟ್ಟು ತಾವು ಅದನ್ನು ಇಂಪ್ಲಿಮೆಂಟ್ ಮಾಡಿಕೊಟ್ಟು ಆ ಜನಗಳಿಗೆ ಬಹಳಷ್ಟು ಅನುಕೂಲ ಮಾಡಿಕೊಡಬೇಕೆಂದು ವಿನಂತಿಸುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ನಮ್ಮ ಹಣಕಾಸಿನ ವ್ಯವಸ್ಥೆಯನ್ನು ನೋಡಿ ಅದನ್ನು ಮಾಡಿಸಿಕೊಡುವುದಕ್ಕೆ ಪ್ರಾಮಾಣಿಕವಾಗಿ ಪ್ರಯತ್ನಪಡುತ್ತೇನೆ. ಮಾನ್ಯ ಡಿ.ಆರ್.ಪಾಟೀಲರನ್ನು ಕರೆಸಿ ಸಂಬಂಧಪಟ್ಟಂಥ ಯಾವ ರಸ್ತೆಗಳು ಅತಿ ತುರ್ತಾಗಿ ಆಗಬೇಕಾಗಿದೆ ಅದನ್ನು ಮಾಡಿಸಲು ಪ್ರಯತ್ನಪಡುತ್ತೇನೆ. ಇದು ಪ್ರಶ್ನೆಯಲ್ಲಿ ಇಲ್ಲ ಆಮೇಲೆ ಅವರನ್ನು ಕರೆಸಿ ಮಾತನಾಡಿ ನಾವು ಮಾಡಿಸಿಕೊಡುವ ಪ್ರಯತ್ನ ಮಾಡುತ್ತೇನೆ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ವಿದ್ಯುತ್ ವ್ಯಾಪಾರ ನಡೆಸಲು ನಿರ್ಬಂಧ

552(5824) ಶ್ರೀ ವಿ. ಸೋಮಣ್ಣ (ಬಿನ್ನಿಪೇಟೆ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ವಿದ್ಯುತ್ ಪ್ರಸರಣ ನಿಗಮವು ವಿದ್ಯುತ್ ವ್ಯಾಪಾರ ನಡೆಸಲು ಸರ್ಕಾರ ನಿರ್ಬಂಧ ಹೊರಡಿಸಿದೆಯೇ;

ಆ) ಹಾಗಿದ್ದಲ್ಲಿ, ಇದಕ್ಕೆ ಕಾರಣಗಳೇನು;

ಇ) ಮುಂದಿನ ದಿನಗಳಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ಯಾವ ರೀತಿ ಕಾರ್ಯ ವ್ಯಾಪ್ತಿ ಹೊಂದಿರುತ್ತದೆ?

ಶ್ರೀ ಹೆಚ್.ಡಿ.ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಹೌದು. ಎಲೆಕ್ಟ್ರಿಸಿಟಿ ಆಕ್ಟ್2003ರ ಸೆಕ್ಷನ್ 39(1) ಪ್ರಕಾರ, ರಾಜ್ಯಗಳ ವಿದ್ಯುತ್ ಪ್ರಸರಣ ಸಂಸ್ಥೆಗಳು ದಿನಾಂಕ 10–6–2005 ರಿಂದ ವಿದ್ಯುತ್ ವಹಿವಾಟನ್ನು ನಿರ್ವಹಿಸುವಂತಿಲ್ಲ. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ದಿನಾಂಕ 10–5–2005ರ ಆದೇಶ ಸಂಖ್ಯೆ ಇಎನ್ 131 ಪಿಎಸ್‌ಆರ್ 2003ರ ಮೂಲಕ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವನ್ನು, ವಿದ್ಯುತ್ ವಹಿವಾಟನ್ನು ನಿರ್ವಹಿಸದಂತೆ ನಿರ್ಬಂಧಪಡಿಸಿರುತ್ತದೆ.